ಫ್ರಾಸಾ-1 ರವರನ್ನು ಪುನಃ ಕರೆಯಿಸಿ ಪ್ರಮಾಣ ವಚನ ಭೋಧಿಸಿದ
ದಿನಾಂಕಃ 15-11-2024
ಮುಂದುವರೆದ ಮುಖ್ಯ ವಿಚಾರಣೆ ವಿಶೇಷ ಸರಕಾರಿ ಅಭಿಯೋಜಕರಿಂದ

3. ಶಿವರೆಡ್ಡಿ ಮತ್ತು ಮಲ್ಲಣ್ಣಗೌಡ ಇಬ್ಬರು ಪಂಚರು ಬಂದು ಲೋಕಾಯುಕ್ತ ಪಿ.ಐ. ಅವರನ್ನು ಬೇಟಿಯಾದರು. ನಾನು ತಂದಿದ್ದ ಅರ್ಜಿಯನ್ನು ಅವರಿಗೆ ತೋರಿಸಿದೆ. ನಾನು ಅರ್ಜಿಯಲ್ಲಿದ್ದ ವಿಷಯವನ್ನು ಅವರುಗಳಿಗೆ ಹೇಳಿದೆ. ಅವರು ಪಂಚರಾಗಲು ಒಪ್ಪಿಕೊಂಡರು. ಮೋಬೈಲನಲ್ಲಿ ನಾನು ಆರೋಪಿ 4,000/- ರೂ ಹಣ ಕೊಡಬೇಕೆಂದು ನನ್ನ ಬಳಿ ಮಾತನಾಡಿದ್ದನ್ನು ನಾನು ರೆಕಾರ್ಡ ಮಾಡಿಕೊಂಡಿದ್ದು ಅದನ್ನು ಹಾಜರಪಡಿಸಿದೆ. ಸದರಿ ಮೊಬೈಲ ರೆಕಾರ್ಡನ್ನು ಕೇಳಿಸಿಕೊಂಡರು. ನಾನು ಹೇಳಿದ ವಿಷಯ ಮತ್ತು ಮೊಬೈಲನಲ್ಲಿ ರೆಕಾರ್ಡ ಆಗಿದ್ದ ಮಾಹಿತಿ ಒಂದೆ ಇತ್ತು. ನಮ್ಮ ತಂದೆ ಜಮೀನಿನ ಪಹಣಿ ಸರ್ವೆ ನಂ.6 ಬೆನಕನಳ್ಳಿ (ಜೆ) ಗ್ರಾಮದ ಜಮೀನನ್ನು 15 ವರ್ಷಗಳ ಕಾಲ ಪರಬಾರೆ ಮಾಡಬಾರದು ಎಂದು ನಿಬಂಧನೆ ಇತ್ತು. ಆ ನಿಬಂಧನೆಯನ್ನು ತೆಗೆಯಲು 4,000/-ರೂ ಲಂಚ ಕೊಡಬೇಕು ಎಂದು ನ್ಯಾಯಾಲಯದ ಮುಂದೆ ಇರುವ ಆರೋಪಿ ಲಂಚ ಕೇಳಿದರು ಆ ಬಗ್ಗೆ ಮಾತದ್ದು ಅದರಲ್ಲಿ ಇತ್ತು. ಅದನ್ನು ಸಿ.ಡಿ. ಮಾಡಿ ಪ್ಯಾಕ ಮಾಡಿದರು. ಅದು ಆರ್ಟಿಕಲ್-1 ಆಗಿದ್ದು ಮು.ಮಾ.2 ಎಂದು ಗುರುತಿಸಲಾಯಿತು. ನಾನು ಹಣ ತಂದಿರುವ ಬಗ್ಗೆ ಲೋಕಾಯುಕ್ತ ಪೊಲೀಸರು ಕೇಳಿದರು 500/-ರೂ ನ 7 ನೋಟುಗಳನ್ನು ತಂದಿದ್ದೇನೆ ಎಂದು ಹೇಳಿದೆ. ಆ ಹಣವನ್ನು ಲೋಕಾಯುಕ್ತ ಇನ್ಸಪೇಕ್ಟರ ಅವರ ಕೈಗೆ ನಾನು ಕೊಟ್ಟಿದ್ದು ಶಿವರೆಡ್ಡಿ ಕೈಗೆ ಕೊಟ್ಟು ಎಣಿಸುವಂತೆ ಹೇಳಿದ್ದು ಆತ ನೋಟಿನ ನಂಬರ ಹೇಳಿದಂತೆ ಮಲ್ಲಣ್ಣಗೌಡ ಒಂದು ಹಾಳೆಯಲ್ಲಿ ನೋಟುಗಳ ನಂಬರನ್ನು ಬರೆದುಕೊಂಡರು ಆ ದಾಖಲೆಯನ್ನು ನಿ.ಪಿ.4 ಎಂದು ಗುರುತಿಸಲಾಯಿತು. ಪಿನಾಪ್ತಲಿನ ಪೌಡರ ಮತ್ತು ಇನ್ನೊಂದು ಪೌಡರ ಬಗ್ಗೆ ಮಾಹಿತಿ ತಿಳಿಸಿದರು. ಪಿನಾಪ್ತಲಿನ ಪೌಡರ ಹಚ್ಚಿದ ವಸ್ತುವನ್ನು ನೀರಿನಲ್ಲಿ ಹಾಕಿದರೆ ಅದು ಗುಲಾಬಿ ಬಣ್ಣಕ್ಕೆ ಬರುತ್ತದೆ ಎಂದು ಹೇಳಿದರು. ಪೇದೆ ನೀಲಕಂಠ ಅವರಿಗೆ ಆ ನೋಟುಗಳನ್ನು ಕೊಟ್ಟಿದ್ದು ಆತ ಪಿನಾಪ್ತಲಿನ ಪೌಡರ ಹಚ್ಚಿದ ಆ ನೋಟುಗಳನ್ನು ಶಿವರೆಡ್ಡಿ ಕೈಗೆ ಕೊಟ್ಟ ಸದರಿ ಶಿವರೆಡ್ಡಿ ಆ ನೋಟುಗಳನ್ನು ಎಣಿಸಿದ ನಂತರ ನನ್ನ ಶರ್ಟನ ಜೇಬಿನಲ್ಲಿ ಇಟ್ಟನು. ಒಂದು ಬಟ್ಟಲಿನಲ್ಲಿ ಧ್ರಾವಣ ಕಲಿಸಿದ್ದು ಅದಕ್ಕೆ ಶಿವರೆಡ್ಡಿಯ ಕೈ ಬೆರಳುಗಳು ಅದ್ದಿದ್ದಾಗ ಅದು ಗುಲಾಬಿ ಬಣ್ಣಕ್ಕೆ ತಿರುಗಿತು. ಆ ಧ್ರಾವಣವನ್ನು 2 ಬಾಟಲಗಳಲ್ಲಿ ಹಾಕಿದರು. ಅವುಗಳನ್ನು ಪ್ಯಾಕ ಮಾಡಿ ಜೆ.ಜೆ. ಎಂದು ಸೀಲ್ ಮಾಡಿದರು. ಅವು ಆರ್ಟಿಕಲ್-2 ಆಗಿದ್ದು ಅದು ಮು.ಮಾ.3 ಎಂದು ಗುರುತಿಸಲಾಯಿತು. ಆ ಎರಡು ಪೌಡರಗಳನ್ನು ಬೇರೆ ಬೇರೆ ಪೊಟ್ಟಗಳಲ್ಲಿ ಹಾಕಿ ಸೀಲ್ ಮಾಡಿ ಕಛೇರಿಯಲ್ಲಿ ಇಟ್ಟರು. ನಂತರ ಆರೋಪಿ ಹಣ ಕೇಳಿದರೆ ಕೊಡು ಎಂದು ಹೇಳಿದ್ದು ಆ ನಂತರ ಆರೋಪಿಯ ಕೈ ಬಣ್ಣದ ನೀರು ಗುಲಾಬಿ ಬಣ್ಣಕ್ಕೆ ಬರುತ್ತದೆ ಎಂದು ಹೇಳಿದರು. ಈ ಬಗ್ಗೆ ಫೋಟೂಗಳನ್ನು ತೆಗೆದರು. ನೆರಳು ಸಾಕ್ಷಿ ಮಲ್ಲಣ್ಣಗೌಡನನ್ನು ನನ್ನ ಜೊತೆ ಹೋಗುವಂತೆ ತಿಳಿಸಿದರು. ಈಗ ನನಗೆ ತೋರಿಸಿದ 13

ಫೋಟೋಗಳನ್ನು ತೆಗೆದಿದ್ದು ಅವುಗಳನ್ನು ನಿ.ಪಿ.5 ರಿಂದ 17 ಎಂದು ಗುರುತಿಸಲಾಯಿತು. ಈ ಬಗ್ಗೆ ಪಂಚನಾಮೆಯನ್ನು ಮಾಡಿದ್ದು ಅದಕ್ಕೆ ನಾನು ಮತ್ತು ಪಂಚರು ಸಹಿ ಮಾಡಿರುತ್ತೇವೆ. ಫಿರ್ಯಾದಿಯ ಜೊತೆಗೆ ಕೊಟ್ಟ ದಾಖಲೆಗಳನ್ನು ಒಟ್ಟಾಗಿ ನಿ.ಪಿ.18 ಎಂದು ಗುರುತಿಸಲಾಯಿತು. ದಿಃ 15.03.2014 ರಂದು ಬೆಳಿಗ್ಗೆ 10-00 ರಿಂದ 11-00 ಗಂಟೆಯವರೆಗೆ ಲೋಕಾಯುಕ್ತ ಕಛೇರಿಯಲ್ಲಿ ಪಂಚನಾಮೆ ಮಾಡಿದ್ದು ಅದನ್ನು ನಿ.ಪಿ.19 ಎಂದು ಸಾಕ್ಷಿಯ ಸಹಿಯನ್ನು ನಿ.ಪಿ.19(ಎ) ಎಂದು ಗುರುತಿಸಲಾಯಿತು. ಎರಡು 4 ಚಕ್ರದ ವಾಹನಗಳಲ್ಲಿ ನಾವುಗಳು ಬೆಳಿಗ್ಗೆ 11-00 ಗಂಟೆಗೆ ಯಾದಗಿರಿ ಬಿಟ್ಟು ಶಹಾಪೂರ  ಕೆ.ಇ.ಬಿ. ಕಛೇರಿ ಆಫೀಸ ಹತ್ತಿರ ನಿಲ್ಲಿಸಿ ನಮಗೆ ಮಾಹಿತಿಯನ್ನು ಕೊಟ್ಟರು. ಮಲ್ಲಣ್ಣಗೌಡನನ್ನು ನನ್ನ ಜೊತೆ ಕಳುಹಿಸಿದರು. ನಾವು ಜೀಪ ನಿಲ್ಲಿಸಿದ ನಂತರ ಶಹಾಪೂರ ತಹಶೀಲ್ದಾರ ಕಛೇರಿಗೆ ನಾನು ಮತ್ತು ಮಲ್ಲಣ್ಣಗೌಡ ಒಳಗೆ ಹೋದೆವು ಉಳಿದ ಸಿಬ್ಬಂದಿಗಳು, ಪಂಚರು ಮತ್ತು ಅಧಿಕಾರಿಗಳು ಅಲ್ಲಲ್ಲಿ ಕಾಣುವಂತೆ ನಿಂತುಕೊಂಡಿದ್ದರು. ಕಛೇರಿ ಒಳಗೆ ಹೋದಾಗ ಬೆಳಿಗ್ಗೆ 12-15 ಗಂಟೆ ಆಗಿತ್ತು. ನಾವು ತಹಶೀಲ್ದಾರ ಕಛೇರಿಯ ಮೊದಲನೇ ಅಂತಸ್ಥಿಗೆ ಇಬ್ಬರು ಹೋದೆವು. ಅಲ್ಲಿ ಆರೋಪಿ ಮೊದಲನೇ ಅಂತಸ್ಥಿನ ಕೊನೆಯ ರೂಮನಲ್ಲಿ ಇದ್ದರು. ನಾನು ನಮ್ಮ ಜಮೀನಿನಲ್ಲಿ 15 ವರ್ಷ ಪರಬಾರೆ ಮಾಡಬಾರದು ಎಂಬ ನಿಬಂಧನೆಯನ್ನು ತೆಗೆದು ಹಾಕಲು ಕೇಳಿದ್ದೇನಲಾ ಎಂದಾಗ ಆರೋಪಿ ಹಣ ತಂದಿದ್ದಿಯಾ ಎಂದು ಕೇಳಿದ. ನಾನು 3,500/- ರೂ ತಂದಿದ್ದೇನೆ ತೆಗೆದುಕೊಳ್ಳಿ ಎಂದು ಹೇಳಿದೆ ಆರೋಪಿಗೆ ಹಣ ಎಣಿಸಿಕೊಳ್ಳುವಂತೆ ಹೇಳಿದೆ ಆಗ ಆರೋಪಿ ಡ್ರಾ ತೆಗೆದು ಹಣ ಡ್ರಾ ಒಳಗೆ ಹಾಕಲು ಸನ್ನೆ ಮಾಡಿ ತೋರಿಸಿದ ನಾನು ಆ ಡ್ರಾದಲ್ಲಿ ಹಣವನ್ನು ಇಟ್ಟಿದ್ದೆ. ನಾನು ಹೊರಗೆ ಬಂದ ನಂತರ ಲೋಕಾಯುಕ್ತ ಇನ್ಸಪೇಕ್ಟರ ಅವರಿಗೆ ಸಿಗ್ನಲ್ ಕೊಟ್ಟೆ ಅವರೆಲ್ಲರೂ ಒಳಗೆ ಬಂದು ಆರೋಪಿಯನ್ನು ಹಿಡಿದುಕೊಂಡರು. ಆರೋಪಿ ಅವರನ್ನು ಯಾರು ಎಂದು ಕೇಳಿದ್ದು ಪಿ.ಐ ಅವರು ತಮ್ಮ ಗುರುತಿನ ಚೀಟಿಯನ್ನು ತೋರಿಸಿದರು. ಲಂಚದ ವಿಷಯವಾಗಿ ಹಿಡಿಯಲು ಬಂದಿದ್ದೇವೆ ಎಂದು ಹೇಳಿದರು. ನಾನು ಆರೋಪಿ ಈತನೇ ಹಣ ಅವನ್ನು ಡ್ರಾದಲ್ಲಿ ಹಾಕು ಎಂದು ಹೇಳಿದ ಮೇರೆಗೆ ಹಾಕಿದ್ದೇನೆ ಎಂದು ಹೇಳಿದೆ. ಆ ಹಣವನ್ನು ಡ್ರಾದಿಂದ ತೆಗೆದು ಲೋಕಾಯುಕ್ತ ಪೊಲೀಸರು ಎಣಿಸಿದರು.

ಸಾಕ್ಷಿಯ ಕೋರಿಕೆಯ ಮೇರೆಗೆ ಮುಂದುವರೆದ ಮುಖ್ಯ ವಿಚಾರಣೆಗಾಗಿ ಕಾಲವಕಾಶ ನೀಡಲಾಯಿತು.

(ನನ್ನ ಉಕ್ತ ಲೇಖನದ ಮೇರೆಗೆ ತೆರೆದ  ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ)

ಓ.ಹೇ.ಕೆ.ಸ. ಇದೆ.

ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಯಾದಗಿರಿ.